ವಸತಿ ಯೋಜನೆಗಳ ಅನುಷ್ಠಾನ

1460(1390), ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ

ಅ) ಸರ್ಕಾರದ ಯೋಜನೆಗಳಾದ ಬಸವ ವಸತಿ ಯೋಜನೆ ಹಾಗೂ ವಾಜಪೇಯಿ ವಸತಿ ಯೋಜನೆಗಳು, ಸ್ಥಳೀಯ ಸಂಸ್ಥೆಗಳಿಂದ ಮತ್ತು ಸರ್ಕಾರದ ಕೆಲವೊಂದು ನಿಬಂಧನೆಗಳಾದ ಗ್ರಾಮಸಭೆ, ಜಿ.ಪಿ.ಎಸ್. ಮತ್ತು ತಾಂತ್ರಿಕ ವ್ಯವಸ್ಥೆಗಳಿಂದ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಗಳ ಪ್ರಗತಿ ಸಾಧಿಸಲು ಸದರಿ ನಿಬಂಧನೆಗಳನ್ನು ಸರಳೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಸರಳೀಕರಣಗೊಳಿಸಲಾಗುವುದು?

ಡಾ॥ ಎಂ.ಹೆಚ್.ಅಂಬರೀಷ್(ವಸತಿ ಸಚಿವರು)

ಅ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಫಲಾನುಭವಿಗಳ ಹಿತದೃಷ್ಟಿಯಿಂದ ವಸತಿ ಯೋಜನೆಗಳನ್ನು ತ್ವರಿತಗೊಳಿಸಿ ಅನುಷ್ಠಾನಗೊಳಿಸಲು, ವಸತಿ ಯೋಜನೆಗಳಲ್ಲಿ ಪಾರದರ್ಶಕತೆ ಮತ್ತು ಸರಳೀಕರಣ ತರಲು, ವಸತಿ ಯೋಜನೆಗಳಡಿ ಸರ್ಕಾರವು ಆಯವ್ಯಯದಲ್ಲಿ ನೀಡುವ ಅನುದಾನ ದುರುಪಯೋಗವಾಗುವುದನ್ನು ತಡೆಗಟ್ಟುವುದೇ ಜಿ.ಪಿ.ಎಸ್. ಅಳವಡಿಕೆಯ ಮುಖ್ಯ ಉದ್ದೇಶ. ಅರ್ಹರಿಗೆ ಫಲಾನುಭವಿಗಳಿಗೆ ಸರ್ಕಾರದ ಅನುದಾನ ತಲುಪುವಂತೆ ಮಾಡಲು, ಜಿ.ಪಿ.ಎಸ್. ಆಧಾರಿತ ಛಾಯಾಚಿತ್ರಗಳನ್ನು ಅಳವಡಿಸುವ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುತ್ತದೆ.

ಆ) ಮತ್ತು ಇ) ಕಂಡಿಕೆ–ಅ ದಲ್ಲಿ ತಿಳಿಸಿರುವಂತೆ ಜಿ.ಪಿ.ಎಸ್. ಆಧಾರಿತ ಛಾಯಾಚಿತ್ರ ಮತ್ತು ಇತರೆ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದು ನಾಲ್ಕು ಹಂತದಲ್ಲಿ ಛಾಯಾಚಿತ್ರ ಗಣಕಯಂತ್ರದಲ್ಲಿ ದಾಖಲಾದ

ಕೂಡಲೇ ಪರಿಶೀಲಿಸಿ ಪ್ರತಿವಾರ ಸಹಾಯಧನವನ್ನು ಪ್ರತಿ ಹಂತಕ್ಕೂ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತದೆ.

ಕೆರೆ ಕಟ್ಟೆಗಳ ಪುನಶ್ಚೇತನ

1463(2313), ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ನಮ್ಮೂರ ಕೆರೆ ಯೋಜನೆಯಡಿಯಲ್ಲಿ 12 ಸಾವಿರ ಕೆರೆ ಕಟ್ಟೆ ಮತ್ತು ಗೋಕಟ್ಟೆಗಳನ್ನು ಪುನಶ್ಚೇತನಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಎಷ್ಟು; ಹಣವನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ. ಇಲ್ಲಿಯವರೆವಿಗೆ ಈ ಪೈಕಿ ಎಷ್ಟು ಮೊತ್ತದ ಹಣವನ್ನು ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ;

ಇ) ಈ ಯೋಜನೆಯಡಿಯಲ್ಲಿ ಇಲ್ಲಿಯವರೆವಿಗೂ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು, ಇದಕ್ಕಾಗಿ ಇಲ್ಲಿಯವರೆಗೆ ಪ್ರತಿ ಜಿಲ್ಲಾ ಪಂಚಾಯ್ತಿಯವರು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ; (ಪೂರ್ಣ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಈ ಯೋಜನೆಯಡಿಯಲ್ಲಿ ಬೀದರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ; ಈ ಯೋಜನೆಯ ಅನುಷ್ಠಾನದಲ್ಲಿ ಶೇಕಡ ಎಷ್ಟು ಪ್ರಗತಿಯನ್ನು ಸಾಧಿಸಲಾಗಿದೆ; ಎಷ್ಟು ಕಾಮಗಾರಿಗಳು ಪೂರ್ಣವಾಗಿವೆ ಮತ್ತು ಎಷ್ಟು ಅಪೂರ್ಣವಾಗಿವೆ? (ಕಾಮಗಾರಿವಾರು ವಿವರ ಒದಗಿಸುವುದು)